


ಇನ್ನೊಂದು ಘಟನೆಯೂ ನಡೆಯಿತು. ಖ್ಯಾತ ಜಾನಪದ ವಿದ್ವಾಂಸರೂ ಕವಿಗಳೂ ಆಗಿದ್ದ ಡಾ. ಎ.ಕೆ. ರಾಮಾನುಜನ್ ಅವರು ಅಮೆರಿಕದಿಂದ ಬೆಂಗಳೂರಿಗೆ ಬಂದಿದ್ದರು. ಅವರು ಇಲ್ಲಿ ತಂಗಿದ್ದ ಅವಧಿಯಲ್ಲೇ ಅವರ ಮೊದಲ ಕವನ ಸಂಕಲನ 'ಹೊಕ್ಕುಳಲ್ಲಿ ಹೂವಿಲ್ಲ' ಪ್ರಕಟವಾಯಿತು. ಅವರು ಒಮ್ಮೆ ನಮ್ಮ ಕನ್ನಡ ಅಧ್ಯಯನ ಕೇಂದ್ರಕ್ಕೆ ಭೇಟಿ ಕೊಟ್ಟರು. ಜೊತೆಗೆ ಪಿ. ಲಂಕೇಶ್ ಅವರೂ ಇದ್ದರು. ಆಗ ಲಂಕೇಶ್ ಅವರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ನಮ್ಮ ಪ್ರಾಧ್ಯಾಪಕರಾದ ಜಿ.ಎಸ್. ಶಿವರುದ್ರಪ್ಪನವರು, ಕೆ.ಮರುಳಸಿದ್ದಪ್ಪನವರು, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರೂ ಸೇರಿದಂತೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಮ್ಮುಖದಲ್ಲಿ ಎ.ಕೆ. ರಾಮಾನುಜನ್ ಅವರು ತಮ್ಮ ಕೆಲವು ಕವಿತೆಗಳನ್ನು ಓದಿದರು. ನನಗೆ ಅಲ್ಪ ಸ್ವಲ್ಪ ಅರ್ಥವಾದವು. ಕೆಲ ಬುದ್ಧಿವಂತರು ತಮಗೆ ಎಲ್ಲವೂ ಅರ್ಥವಾದಂತೆ ಹಸನ್ಮುಖಿಗಳಾಗಿ ಸಂಭ್ರಮಿಸುತ್ತಿದ್ದರು. ಆಗ ಕೇಳಿ ಬಂದ ಮಾತು: 'ಹೊಕ್ಕುಳಲ್ಲಿ ಹೂವಿಲ್ಲ ಎಂಬುದು ರಾಮಾನುಜನ್ ಅವರ ಪ್ರಕಟಿತ ಮೊದಲ ಸಂಕಲನ. ಆದರೆ, ಪ್ರಕಟಿಸದೇ ಹೋದ ಮೂರ್‍ನಾಲ್ಕು ಸಂಕಲನಗಳ ನಂತರ ಬಂದಿರುವ ಅತ್ಯುತ್ತಮ ಸಂಕಲನ' – ಇಂಥ ಪ್ರಶಂಸೆಯ ಜೊತೆಗೆ ಶ್ರೇಷ್ಠವಾದದ್ದನ್ನು ಪ್ರಕಟಿಸಬೇಕು, ಸುಖಾಸುಮ್ಮನೆ ಬರೆದದ್ದೆಲ್ಲ ಪ್ರಕಟಿಸಬಾರದು ಎಂಬಂಥ ಮಾತುಗಳು ಕೇಳಿಬಂದವು. ಪ್ರಕಟಿಸದೆ ಇದ್ದರೆ ಅದು ಶ್ರೇಷ್ಠವೊ ಕನಿಷ್ಠವೊ ಎಂದು ಗೊತ್ತಾಗುವುದಾದರೂ ಹೇಗೆ ಎಂಬ ಪ್ರಶ್ನೆಯೊಂದು ನನ್ನಲ್ಲಿ ಎದ್ದಿತು. ಆಗ ಪ್ರಕಟಣೆಯ ನಂತರದ ಹೊರ ವಿಮರ್ಶೆಗೆ ಮುಂಚೆ, ನಮ್ಮಲ್ಲೇ ಆತ್ಮವಿಮರ್ಶೆಯೊಂದು ಇರಬೇಕು ಎಂಬ ಸತ್ಯವನ್ನು ಕಂಡುಕೊಂಡೆ. ಅನುಭವ ಮತ್ತು ಅಧ್ಯಯನಶೀಲತೆಗಳೊಂದಾದ ಸೃಜನಶೀಲತೆ ಮುಖ್ಯ. ಆಗ ನಮಗೇ ನಮ್ಮ ಪ್ರತಿಭೆಯ ಸತ್ಯ ಅರಿವಾಗುತ್ತದೆ. ಸರಿ; ಆದರೆ ನಮ್ಮ ಸತ್ಯದ ಅರಿವೇ ವಿಮರ್ಶಕರ ಸತ್ಯದ ಅರಿವೂ ಆಗಬೇಕಿಲ್ಲ. ಹಾಗಾದರೆ ಶ್ರೇಷ್ಠ-ಕನಿಷ್ಠಗಳ ಮಾನದಂಡ ಯಾವುದು? ಇದೊಂದು ಜಟಿಲ ಪ್ರಶ್ನೆ. ಅಂದು ಪುಟಿದೆದ್ದ ಪ್ರಶ್ನೆ ಇಂದು ಕೂಡ ಮೌನವಾಗಿಲ್ಲ.

ಇನ್ನೊಂದು ಪ್ರಸಂಗವನ್ನು ಇಲ್ಲಿ ಹೇಳಬೇಕು. ನಾನು ಎಂ.ಎ. ವ್ಯಾಸಂಗ ಮುಗಿದ ಮೇಲೆ ತುಮಕೂರು ಸರ್ಕಾರಿ ಕಾಲೇಜಿನಲ್ಲಿ ಹೊಸದಾಗಿ ಅಧ್ಯಾಪಕ ಹುದ್ದೆಗೆ ಸೇರಿದ್ದೆ. ಹೊಸತನಕ್ಕೆ ಹಂಬಲಿಸುವ ನನ್ನ ಅಂತರಂಗ ನವ್ಯ ಸಾಹಿತ್ಯವನ್ನು ಆಸ್ವಾದಿಸಲು ಪ್ರೇರಣೆಯಾಗಿತ್ತು. ನಾನು ಅದೇ ನವ್ಯದ 'ಹೊರ ಮೈ' ಕವಿತೆಗಳನ್ನು ಬರೆದಿದ್ದೆ. ಒಳಮನಸ್ಸು ಮಾತ್ರ ಸಾಮಾಜಿಕ ಕಾಳಜಿಯ ಕಣಜವಾಗಿತ್ತು. ಆಗ ಗೋಪಾಲಕೃಷ್ಣ ಅಡಿಗರ